ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	408
ಸದಸ್ಯರ ಹೆಸರು	:	ಶ್ರೀ.ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	15.12.2021
ಉತ್ತರಿಸುವ ಸಚಿವರು	:	ಪಶುಸಂಗೋಪನೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಒಟ್ಟು ಗ್ರಾಮೀಣ ಹಾಗೂ ತಾಲ್ಲೂಕು ಮಟ್ಟದ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಈ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಗ್ರಾಮೀಣ ಹಾಗೂ ತಾಲ್ಲೂಕು ಮಟ್ಟದ ಪಶು ವೈದ್ಯಕೀಯ ಆಸ್ಪತ್ರೆಗಳ ವಿವರ ಈ ಕೆಳಕಂಡಂತಿದೆ. (ಜಿಲ್ಲಾವಾರು ವಿವರವನ್ನು <u>ಅನುಬಂಧ -1</u> ರಲ್ಲಿ ನೀಡಲಾಗಿದೆ)
<table>
<tr><th>ಕ್ರ. ಸಂ</th><th>ವಿವರ</th><th>ಸಂಖ್ಯೆ</th></tr>
<tr><td>1</td><td>ಗ್ರಾಮೀಣ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ</td><td>3830</td></tr>
<tr><td>2</td><td>ತಾಲ್ಲೂಕು ಮಟ್ಟದ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ</td><td>176</td></tr>
<tr><td>3</td><td>ಸಂಚಾರಿ ಪಶು ಚಿಕಿತ್ಸಾಲಯ ಸಂಖ್ಯೆ</td><td>176</td></tr>
<tr><td></td><td>ಒಟ್ಟು</td><td>4182</td></tr>
</table>
ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಲಾಖೆಗೆ ಮಂಜೂರಾದ, ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು <u>ಅನುಬಂಧ-2</u> ರಲ್ಲಿ ನೀಡಲಾಗಿದೆ.</td></tr>
<tr><td>ಆ)</td><td>ರಾಜ್ಯದ ಗಡಿರೇಖೆಗಳಲ್ಲಿ ಇರುವ ನೂರಾರು ಹಳ್ಳಿಗಳ ಜನರು ಸಂಪೂರ್ಣ ಹೈನುಗಾರಿಕೆಯನ್ನು ತಮ್ಮ ನಿತ್ಯ ಕಸುಬುನ್ನಾಗಿಸಿ ಕೊಂಡಿದ್ದು ಗಡಿಭಾಗದಲ್ಲಿ ಇವೆ ಎಂಬ ಕಾರಣದಿಂದ ಅಂತಹ ಗ್ರಾಮೀಣ ಪ್ರದೇಶಗಳಲ್ಲಿ ಪಶು ಚಿಕಿತ್ಸಾಯಲಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಗಾಮೀಣ ಪ್ರದೇಶದಲ್ಲಿ ಪಶು ಚಿಕಿತ್ಸಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</td></tr>
</table>

ಇ)	ಒಂದು ಕಡೆ ಪಶು ಚಿಕಿತ್ಸಾಲಯಗಳ ಕೊರತೆ ಇದ್ದು ಇನ್ನೊಂದು ಕಡೆ ಸೂಕ್ತ ಸಿಬ್ಬಂದಿಗಳ ಕೊರತೆಯಿಂದಾಗಿ ಗ್ರಾಮೀಣ ಭಾಗದ ರೈತರು ತೊಂದರೆ ಅನುಭವಿಸುತ್ತಿದ್ದ ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಈ ಕೊರತೆಯನ್ನು ಸರಿದೂಗಿಸಲಾಗುವುದು ?	ಪ್ರಸ್ತುತ ಖಾಲಿ ಇರುವ ಪಶುವೈದ್ಯರ ಹುದ್ದೆಗಳಿಗೆ ಅಧಿಕ ಪ್ರಭಾರದ ವ್ಯವಸ್ಥೆ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಭಾಗದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧ 47 ಪಶುವ್ಯದ್ಯಾಧಿಕಾರಿಗಳ ಆಯ್ಕೆ ಮಾಡಲಾಗಿದ್ದು, ಈ ಪೈಕಿ 35 ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶ ನೀಡಲಾಗಿರುತ್ತದೆ. ಉಳಿದ 12 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಚಾಲನೆಯಲಿದೆ. ಪಶುವೈದ್ಯಕೀಯ ಪರೀಕ್ಷಕರ 32 ಹುದ್ದೆಗಳನ್ನು ಮತ್ತು ಪಶುವೈದ್ಯಕೀಯ ಸಹಾಯಕರ 83 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಉಳಿದಂತೆ 900 ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ತುಂಬುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಆರ್ಥಿಕ ಇಲಾಖೆ ಸಹಮತಿ ನೀಡಿದ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು. ಇಲಾಖೆಯಲ್ಲಿ ಖಾಲಿ ಇರುವ “ಡಿ” ದರ್ಜೆ ಹುದ್ದೆಗಳಿಗೆದುರಾಗಿ ಈಗಾಗಲೇ ಒಟ್ಟು 2256 ಹುದ್ದೆಗಳನ್ನು ಮತ್ತು ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಿಗೆದುರಾಗಿ ಒಟ್ಟು 177 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗುತ್ತಿದೆ. ಇಲಾಖೆಯಲ್ಲಿ ಪಶುಚಿಕಿತ್ಸಾಲಯಗಳ ಕೊರತೆ ಇದ್ದು ಈ ಕೊರತೆ ನೀಗಿಸಲು ಹೊಸ ಪಶುಚಿಕಿತ್ಸಾಲಯ ಪ್ರಾರಂಭಿಸುವ ಕಾರ್ಯಕ್ರಮ ಪರಿಶೀಲನೆಯಲ್ಲಿರುತ್ತದೆ. ಸದ್ಯ ಅವಶ್ಯಕ ಚಿಕಿತ್ಸೆಗಾಗಿ ಆಯ್ದ ಗ್ರಾಮಗಳಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳ ವ್ಯವಸ್ಥೆ ಮಾಡಲಾಗಿದೆ.

ಸಂ: ಪಸಂಮೀ ಇ-178 ಪಸಸೇ 2021

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

ಅನುಬಂಧ 1

ಜಿಲ್ಲಾವಾರು ಗ್ರಾಮೀಣ ಮತ್ತು ತಾಲ್ಲೂಕು ಮಟ್ಟದ ಪಶುವೈದ್ಯಕೀಯ ಆಸ್ಪತ್ರೆಗಳ ವಿವರ					
ಕ್ರ.ಸಂ	ಜಿಲ್ಲೆ	ರಾಜ್ಯದಲ್ಲಿರುವ ಗ್ರಾಮೀಣ ಪಶು ವೈದ್ಯಕೀಯ ಆಸ್ಪತ್ರೆಗಳು	ರಾಜ್ಯದಲ್ಲಿರುವ ತಾಲ್ಲೂಕು ಮಟ್ಟದ		ಒಟ್ಟು
			ಪಶುವೈದ್ಯಕೀಯ ಆಸ್ಪತ್ರೆಗಳು	ಸಂಚಾರಿ ಪಶು ಚಿಕಿತ್ಸಾಲಯ	
1	ಬೆಂಗಳೂರು ನಗರ	92	4	4	100
2	ಬೆಂಗಳೂರು ಗ್ರಾಮಾಂತರ	94	4	4	102
3	ಚಿತ್ರದುರ್ಗ	143	6	6	155
4	ಚಿಕ್ಕಬಳ್ಳಾಪುರ	94	6	6	106
5	ದಾವಣಗೆರೆ	144	5	5	154
6	ಕೋಲಾರ	102	5	5	112
7	ರಾಮನಗರ	111	4	4	119
8	ಶಿವಮೊಗ್ಗ	156	7	7	170
9	ತುಮಕೂರು	228	10	10	248
10	ಚಾಮರಾಜನಗರ	74	4	4	82
11	ಚಿಕ್ಕಮಗಳೂರು	126	7	7	140
12	ದಕ್ಷಿಣ ಕನ್ನಡ	101	5	5	111
13	ಹಾಸನ	203	8	8	219
14	ಕೊಡಗು	67	3	3	73
15	ಮೈಸೂರು	173	7	7	187
16	ಮಂಡ್ಯ	204	7	7	218
17	ಉಡುಪಿ	82	3	3	88
18	ಬೆಳಗಾವಿ	250	10	10	270
19	ಬಾಗಲಕೋಟೆ	130	6	6	142
20	ಧಾರವಾಡ	101	5	5	111
21	ಗದಗ	76	5	5	86
22	ಹಾವೇರಿ	131	7	7	145
23	ಉತ್ತರ ಕನ್ನಡ	121	11	11	143
24	ವಿಜಯಪುರ	130	5	5	140
25	ಬಳ್ಳಾರಿ	135	8	8	151
26	ಬೀದರ್	103	5	5	113
27	ಕೊಪ್ಪಳ	73	4	4	81
28	ಕಲಬುರ್ಗಿ	199	7	7	213
29	ರಾಯಚೂರು	95	5	5	105
30	ಯಾದಗಿರಿ	92	3	3	98
	ರಾಜ್ಯ ಒಟ್ಟು	**3830**	**176**	**176**	**4182**

ಅನುಬಂಧ – 2

ಕ್ರ.ಸಂ.	ಪದನಾಮ	ಮಂಜೂರು	ಭರ್ತಿ	ಖಾಲಿ
1	ಉಪ ನಿರ್ದೇಶಕರು (ಪಾಲಿಕ್ಲಿನಿಕ್)	30	19	11
2	ಸಹಾಯಕ ನಿರ್ದೇಶಕರು	176	176	0
3	ಮುಖ್ಯ ಪಶುವೈದ್ಯಾಧಿಕಾರಿ *	509	650	0
4	ಮುಖ್ಯ ಪಶುವೈದ್ಯಾಧಿಕಾರಿ(ವಿಷಯ ತಜ್ಞರು)	30	30	0
5	ಹಿರಿಯ ಪಶುವೈದ್ಯಾಧಿಕಾರಿ	970	817	153
6	ಹಿರಿಯ ಪಶುವೈದ್ಯಾಧಿಕಾರಿ (ವಿಷಯ ತಜ್ಞರು)	30	15	15
7	ಪಶುವೈದ್ಯಾಧಿಕಾರಿ	1572	544	1028
8	ಪಶುವೈದ್ಯಾಧಿಕಾರಿ (ವಿಷಯ ತಜ್ಞರು)	30	20	10
9	ಜಾನುವಾರು ಅಭಿವೃದ್ಧಿ ಅಧಿಕಾರಿ	227	142	85
10	ಜಾನುವಾರು ಅಧಿಕಾರಿ	500	358	142
11	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	1825	1405	420
12	ಪಶುವೈದ್ಯಕೀಯ ಪರೀಕ್ಷಕರು	1847	1294	553
13	ಪಶುವೈದ್ಯಕೀಯ ಸಹಾಯಕರು	2144	1194	950
14	ವೆಟರಿನರಿ ಅಟೆಂಡೆಂಟ್ / ಗ್ರೂಪ್ ಡಿ	7363	2100	5263

* ಕ್ರ.ಸಂ 3 ಕ್ಕೆ ಸಂಬಂಧಪಟ್ಟಂತೆ ಹೊಂದಾಣಿಕೆ ಹುದ್ದೆಗಳು ಹೆಚ್ಚುವರಿ

ನಿರ್ದೇಶಕರು